**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 2410/2025 ಸಿ.ಡಬ್ಲೂ.21 ಪಿ.ಡಬ್ಲೂ.8

| | |
|---|---|
| ಹೆಸರು | ಪ್ರಕಾಶ |
| ತಂದೆ/ಗಂಡ | ರೇವಣಸಿದ್ದಪ್ಪಾ |
| ವಯಸ್ಸು | 41 ವರ್ಷ |
| ಉದ್ಯೋಗ | ಸಿ.ಪಿ.ಐ |
| ವಾಸಸ್ಥಳ | ಪ್ರಧಾನ ಕಚೇರಿ ಬೆಂಗಳೂರು |

ದಿನಾಂಕ 06-03-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ಅಕ್ಟೋಬರ 2023 ರಿಂದ ನವೆಂಬರ 2025 ವರೆಗೆ ಸಿ.ಪಿ.ಐ ಆಳಂದ ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26-12-2024 ರಂದು ಚಾಸಾ 20 ರವರ ಕಡೆಯಿಂದ ಈ ಪ್ರಕರಣದ ಕಡವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ 5 ಮತ್ತು 6 ರವರ ಸಮಕ್ಷಮ ಸಾ. 4.00 ರಿಂದ 5.00 ಗಂಟೆಗೆಯವರೆಗೂ ಪಂಚನಾಮೆ ಮಾಡಿ ಸ್ಥಳದಿಂದ ಒಂದು ಮೋಟಾರ ಸೈಕಲ ನಂಬರ ಕೆ .ಎ 32/ಎಚ್ಇ-7916 ವಾಹನವನ್ನು ಜಪ್ತಿ ಪಡಿಸಿಕೊಂಡು ಸ್ಥಳದಲ್ಲಿ ಒಂದು ಭಾವ ಚಿತ್ರವನ್ನು ತೆಗೆದುಕೊಂಡಿರುತ್ತೇನೆ. ನಂತರ ನಮ್ಮ ಸಿಬ್ಬಂದಿಯಾದ ಬಸವಾರಾಜ ಸಿ.ಪಿ.ಸಿ 417 ಅವರ ಕಡೆಯಿಂದ ಕಲಂ 63(4) ಅಡಿಯಲ್ಲಿ ಪ್ರಮಾಣ ಪತ್ರವನ್ನು ತೆಗೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 9 ಮತ್ತು 10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 27-12-2024 ರಂದು ಚಾಸಾ 2, 3 ಮತ್ತು 11 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 16 ರವರ ಕಡೆಯಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 06-01-2025 ರಂದು ಚಾಸಾ 18 ರವರು ಹಾಜರುಪಡಿಸಿದ ವಾಹನ ಸಂಖ್ಯೆ ಕೆ ಎ 17/ಎಮ-3563 ಯನ್ನು ಚಾಸಾ 7 ಮತ್ತು 8 ರವರ ಸಮಕ್ಷಮ ಜಪ್ತಿ ಪಡಿಸಿಕೊಂಡು ಮ. 2.00 ರಿಂದ 3.00 ಗಂಟೆಯವರೆಗೆ ಜಪ್ತಿ ಪಂಚನಾಮೆ ಮಾಡಿ ಒಂದು ಭಾವ ಚಿತ್ರವನ್ನು ತೆಗೆದುಕೊಂಡಿರುತ್ತೇನೆ. ದಿಃ 09-01-2025 ರಂದು ಚಾಸಾ 1 ರಿಂದ 3, 9 ರಿಂದ 11 ರವರ ಪುರವಣಿ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿಯು ಠಾಣೆಗೆ ಬಂದು ಹಾಜರಾದ ಕಾರಣ ದಸ್ತಗೀರ ನಿಯಮ ಪಾಲಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ 06-02-2025 ರಂದು ಐ,ಎಮ.ಐ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ 07-02-2025 ರಂದು ಮೃತನ ಪಿ.ಎಮ.ಎ ವರದಿಯನ್ನು

ಪಡೆದುಕೊಂಡಿರುತ್ತೇನೆ. ದಿಃ 13-03-2025 ರಂದು ಚಾಸಾ 2 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿಃ 09-01-2025 ಮತ್ತು ದಿಃ 18-01-2025 ರಂದು ಪ್ರಕರಣದಲ್ಲಿ ಭಾಗಿಯಾದ ವಾಹನಗಳ ಮಾಲೀಕರಿಂದ ವಾಹನಗಳ ದಾಖಲಾತಿಗಳು ಮತ್ತು ಇಂಡಮನಿಟಿ ಬಾಂಡಗಳನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ದಿಃ 13-3-2025 ರಂದು ತನಿಖೆ ಪೂರ್ಣಗೊಂಡ ಕಾರಣ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ದಿಃ 26-12-2024 ರಂದು ಸಲ್ಲಿಸಿದ ಕಲಂ 63(ಬಿ) ಅಡಿಯಲ್ಲಿನ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 16(ಎ) ಅಂತಾ ಗುರುತಿಸಲಾಯಿತು. ಶವ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 17 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 17(ಎ) ಅಂತಾ ಗುರುತಿಸಲಾಯಿತು. ಗುನ್ಹಾ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 18, ಸಾಕ್ಷಿಯ ಸಹಿಯನ್ನು ನಿಪಿ. 18(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಒಂದು ಭಾವ ಚಿತ್ರದಲ್ಲಿ ಅವರ ಇರುವಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಭಾವ ಚಿತ್ರವನ್ನು ನಿಪಿ. 19, ಸಾಕ್ಷಿಯ ಸಹಿಯನ್ನು ನಿಪಿ. 19(ಎ) ಅಂತಾ ಗುರುತಿಸಲಾಯಿತು. ದಿಃ 26-12-2024 ರಂದು ಸಲ್ಲಿಸಿದ ಕಲಂ 63(ಬಿ) ಅಡಿಯಲ್ಲಿನ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 20(ಎ) ಅಂತಾ ಗುರುತಿಸಲಾಯಿತು. ಜಪ್ತಿ ಪಂಚನಾಮೆಯಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 21 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 21(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಒಂದು ಭಾವ ಚಿತ್ರದಲ್ಲಿ ಅವರ ಇರುವಿಕೆಯನ್ನು ನೋಡಿ ಗುರುತಿಸಿದ್ದು ಸದರಿ ಭಾವ ಚಿತ್ರವನ್ನು ನಿಪಿ. 22, ಸಾಕ್ಷಿಯ ಸಹಿಯನ್ನು ನಿಪಿ. 22(ಎ) ಅಂತಾ ಗುರುತಿಸಲಾಯಿತು. ದಿಃ 06-01-2025 ರಂದು ಸಲ್ಲಿಸಿದ ಕಲಂ 63(ಬಿ) ಅಡಿಯಲ್ಲಿನ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 23 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 23(ಎ) ಅಂತಾ ಗುರುತಿಸಲಾಯಿತು. ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 24 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 24(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಎಮ ವಿ ಎ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 25 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 25(ಎ) ಅಂತಾ ಗುರುತಿಸಲಾಯಿತು. ಎರಡು ಇಂಡಮನಿಟಿ ಬಾಂಡಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ. 26 ಮತ್ತು 27 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 26(ಎ) ಮತ್ತು ನಿಪಿ.27(ಎ)ಅಂತಾ ಗುರುತಿಸಲಾಯಿತು. ಸಾಕ್ಷಿಯು 6 ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 28 ಅಂತಾ ಗುರುತಿಸಲಾಯಿತು. ದಿಃ 09-01-2025 ಮತ್ತು ದಿಃ 18-01-2025 ರಂದು ಸಲ್ಲಿಸಿದ ಕಲಂ 63(ಬಿ) ಅಡಿಯಲ್ಲಿನ ಪ್ರಮಾಣ ಪತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ. 29 ಮತ್ತು ನಿಪಿ.30 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 29(ಎ) ಮತ್ತು 30(ಎ) ಅಂತಾ ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ **ಶ್ರೀ. ಎಸ್ ಡಿ ಬಿ** ವಕೀಲರಿಂದ:</u>

ದಿಃ 26-12-2024 ರಂದು ಚಾಸಾ 19 ರವರ ಕಡೆಯಿಂದ ಮಧ್ಯಾಹ್ನ ಸುಮಾರು 1.30 ರಿಂದ 2.00 ಗಂಟೆಯ ಸಮಯದಲ್ಲಿ ಈ ಪ್ರಕರಣದ ಕಡವನ್ನು ನನ್ನ ಕಚೇರಿಯಲ್ಲಿ ಪಡೆದುಕೊಂಡಿರುತ್ತೇನೆ. ಗುನ್ಹಾ ಸ್ಥಳಕ್ಕೆ ನಾನು ಮತ್ತು ಪಂಚರು ಹೋಗಿದ್ದೇವು ಚಾಸಾ 1 ರವರಿಗೆ ನೇರವಾಗಿ ಸ್ಥಳಕ್ಕೆ ಬರಲು ಹೇಳಿದ್ದೇವು. ನಿಪಿ. 19 ರಲ್ಲಿ ದ್ವಿಚಕ್ರ ವಾಹನವು ಕಾಣಿಸುತ್ತಿಲ್ಲ ಎಂದರೆ ಸರಿ. ನಾನು ಸುಮಾರು 5.30 ರಿಂದ 6.00 ಗಂಟೆಯ ಒಳಗೆ ಮರಳಿ ಠಾಣೆಗೆ ಬಂದಿರುತ್ತೇನೆ. ನಾನು ಹೇಳಿಕೆಗಳನ್ನು ನನ್ನ ಕಚೇರಿಯಲ್ಲಿ ತೆಗೆದುಕೊಂಡಿರುತ್ತೇನೆ. ಸದರಿ ಹೇಳಿಕೆಗಳನ್ನು ಸಾಯಂಕಾಲ ತೆಗೆದುಕೊಂಡಿರುತ್ತೇನೆ ಸಮಯ ಹೇಳಲು ಬರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಸಹಾಯ ಮಾಡಲು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ